# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 658 |
| ಉತ್ತರಿಸಬೇಕಾದ ದಿನಾಂಕ | : | 12.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪಶುಸಂಗೋಪನೆ ಇಲಾಖೆಯಲ್ಲಿ ಕಳೆದ 3 ವರ್ಷಗಳಿಂದ ಪಶು ಅಭಿವೃದ್ಧಿಗಾಗಿ ರೈತರಿಗೆ ನೀಡುತ್ತಿರುವ ಯೋಜನೆಗಳಾವುವು: | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕಳೆದ 3 ವರ್ಷಗಳಿಂದ ರೈತರಿಗೆ ನೀಡಲಾಗುತ್ತಿರುವ ಯೋಜನೆಗಳ ವಿವರಗಳನ್ನು **ಅನುಬಂಧ- 1 ರಲ್ಲಿ** ನೀಡಲಾಗಿದೆ. |
| ಆ | ಪಶುಗಳಿಗೆ ಬಂದಿರುವ ಖಾಯಿಲೆಗಳು ಯಾವುವು; ಇವುಗಳನ್ನು ಗುಣಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಜಾನುವಾರುಗಳಲ್ಲಿ ಸಾಮಾನ್ಯವಾಗಿ ಬ್ಯಾಕ್ಟೀರಿಯಾಗಳಿಂದ ನೆರಡಿ ರೋಗ, ಚಪ್ಪೆ ರೋಗ, ಕಂದು ರೋಗ, ಗಳಲೆ ರೋಗ ಮತ್ತು ಕುರಿ ಮತ್ತು ಮೇಕೆಗಳ ಕರುಳು ಬೇನೆ ಹಾಗೂ ವೈರಾಣುಗಳಿಂದ (VIRUS) ಕಾಲು ಬಾಯಿ ಜ್ವರ, ಚರ್ಮಗಂಟು ರೋಗ, ಕುರಿ/ಮೇಕೆಗಳಲ್ಲಿ ಕಂಡುಬರುವ ನೀಲಿನಾಲಿಗೆ ರೋಗ, ಕುರಿ ಸಿಡುಬು, ಪಿ.ಪಿ.ಆರ್ ರೋಗಗಳು ಕಂಡುಬರುತ್ತವೆ.<br><br>ಪ್ರತಿ ವರ್ಷ ಮೇಲ್ಕಂಡ ರೋಗಗಳನ್ನು ನಿಯಂತ್ರಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಹಾಗೂ ರಾಜ್ಯ ಸರ್ಕಾರದ ವೇಳಾಪಟ್ಟಿಯನುಸಾರ ನಿರ್ದಿಷ್ಟ ಮಾಹೆಗಳಲ್ಲಿ ರಾಜ್ಯಾದ್ಯಂತ ಜಾನುವಾರುಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.<br><br>2022-23ನೇ ಸಾಲಿನಲ್ಲಿ ವಿವಿಧ ಜಾನುವಾರು ರೋಗಗಳ ನಿಯಂತ್ರಣಕ್ಕಾಗಿ ಲಸಿಕೆ ಹಾಕಲಾಗಿರುವ ಜಾನುವಾರುಗಳ ವಿವರ ಕೆಳಕಂಡಂತಿದೆ. ರೋಗದ ಹೆಸರು ಲಸಿಕೆ ಹಾಕಿರುವ ಜಾನುವಾರುಗಳ ಸಂಖ್ಯೆ **(ಲಕ್ಷಗಳಲ್ಲಿ)**<br><br>ನೆರಡಿ ರೋಗ: 6.06<br>ಚಪ್ಪೆ ರೋಗ: 2.00<br>ಕಂದು ರೋಗ: 4.39<br>ಗಳಲೆ ರೋಗ: 104.22<br>ಕರುಳು ಬೇನೆ: 268.77 (2 ಸುತ್ತುಗಳಲ್ಲಿ)<br>ಕಾಲು ಬಾಯಿ ಜ್ವರ: 100.76<br>ಪಿ.ಪಿ.ಆರ್: 100.09<br>ಕುರಿ/ ಮೇಕೆ ಸಿಡುಬು: 4.65<br>ನೀಲಿ ನಾಲಿಗೆ ರೋಗ: 7.48<br>ಚರ್ಮಗಂಟು ರೋಗ: 101.12 |

| | | |
|---|---|---|
| | | ಈ ಕಾಯಿಲೆಗಳು ಕಂಡು ಬಂದ ಸಂದರ್ಭದಲ್ಲಿ ರೋಗಕ್ಕೆ ಅಗತ್ಯವಿರುವ ಔಷಧಿ ಮತ್ತು ರಾಸಾಯನಿಕಗಳನ್ನು ಸರ್ಕಾರವು ಸರಬರಾಜು ಮಾಡುತ್ತಿದ್ದು, ಉಚಿತವಾಗಿ ಸೂಕ್ತ ಚಿಕಿತ್ಸೆ ನೀಡಿ ರೋಗವನ್ನು ಗುಣಪಡಿಸಲಾಗುತ್ತಿದೆ.. |
| ಇ | ವಿಜಯಪುರ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾ ಘಟಕ ಆಸ್ಪತ್ರೆಗಳು ಎಷ್ಟು; ಇವುಗಳಲ್ಲಿ ಎಷ್ಟು ಸಿಬ್ಬಂದಿಗಳಿದ್ದಾರೆ. ಸಿಬ್ಬಂದಿಗಳ ಕೊರತೆ ಇರುವ ಸಂಖ್ಯೆ ಎಷ್ಟು (ವಿವರ ನೀಡುವುದು) | ವಿಜಯಪುರ ಜಿಲ್ಲೆಯಲ್ಲಿ ಒಟ್ಟು 142 ಪಶುಚಿಕಿತ್ಸಾ ಘಟಕ / ಆಸ್ಪತ್ರೆಗಳು ಇವೆ. ಒಟ್ಟು 336 ಅಧಿಕಾರಿ / ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಂಜೂರು / ಭರ್ತಿ / ಖಾಲಿ ಸಿಬ್ಬಂದಿ ವಿವರವನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ |

**ಇ- ಪಸಂಮೀ 131 ಸಲೆವಿ 2023**

**(ಕೆ. ವೆಂಕಟೇಶ್)**

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658 ಕ್ಕೆ ಅನುಬಂಧ-1**

**ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕಳೆದ 3 ವರ್ಷಗಳಿಂದ ರೈತರಿಗೆ ನೀಡುತ್ತಿರುವ ಯೋಜನೆಗಳ ವಿವರ.**

| ಕ್ರ ಸಂ | ವಿವರ |
|---|---|
| 1 | ➢ **ಹಾಲು ಕರೆಯುವ ಯಂತ್ರ ವಿತರಣೆ :** ಪರಿಶಿಷ್ಟ ಜಾತಿ & ಪಂಗಡದ ಫಲಾನುಭವಿಗಳಿಗೆ ಶೇಕಡ 90% ಸಹಾಯಧನದಲ್ಲಿ ಹಾಲು ಕರೆಯುವ ಯಂತ್ರ ವಿತರಣೆ |

| ಘಟಕದವಿವರಗಳು | ಘಟಕದ ವೆಚ್ಚ | ಸಹಾಯಧನ ಶೇಕಡ 90% | ಫಲಾನುಭವಿಯ ವಂತಿಕೆ 10% |
|---|---|---|---|
| ಹಾಲು ಕರೆಯುವ ಯಂತ್ರ ವಿತರಣೆ | ರೂ.50900/- | ರೂ.45810/- | ರೂ.5090/- |

| ಕ್ರ ಸಂ | ವಿವರ |
|---|---|
| 2 | ➢ **ಹಸುಗಳ ರಬ್ಬರ್ ಮ್ಯಾಟ್ ವಿತರಣೆ**<br>• ಪರಿಶಿಷ್ಟ ಜಾತಿ & ಪಂಗಡದ ಫಲಾನುಭವಿಗಳಿಗೆ ಶೇಕಡ 90% ಸಹಾಯಧನದಲ್ಲಿ ಹಸುಗಳ ರಬ್ಬರ್ ಮ್ಯಾಟ್ ವಿತರಣೆ. |

| ಘಟಕದ ವಿವರ | ಘಟಕದ ವೆಚ್ಚ | ಸಹಾಯಧನ | ಫಲಾನುಭವಿ ವಂತಿಕೆ |
|---|---|---|---|
| ಎರಡು ರಬರ್ ನೆಲಹಾಸು | ರೂ6190/- | ರೂ5571/- | ರೂ619/- |

| ಕ್ರ ಸಂ | ವಿವರ |
|---|---|
| 3 | ➢ **ಹೈನು ಘಟಕ ವಿತರಣೆ:**<br>• ಪರಿಶಿಷ್ಟ ಜಾತಿ & ಪಂಗಡದ ಫಲಾನುಭವಿಗಳಿಗೆ ಶೇಕಡ 90% ಸಹಾಯಧನದಲ್ಲಿ ಒಂದು ಮಿಶ್ರ ತಳಿ ಹಸು /ಸುಧಾರಿತ ತಳಿ ಎಮ್ಮೆ ವಿತರಣೆ. |

| ಘಟಕದವಿವರಗಳು | ಘಟಕದ ವೆಚ್ಚ | ಸಹಾಯಧನ ಶೇಕಡ 90% | ಫಲಾನುಭವಿಯ ವಂತಿಕೆ 10% |
|---|---|---|---|
| ಒಂದು ಮಿಶ್ರ ತಳಿ ಹಸು /ಸುಧಾರಿತ ತಳಿ ಎಮ್ಮೆ ವಿತರಣೆ | ರೂ.60,000/- | ರೂ.54,000/- | ರೂ.6000/- |

| ಕ್ರ ಸಂ | ವಿವರ |
|---|---|
| 4 | ➢ **10+1 ಕುರಿ/ಮೇಕೆ ಘಟಕ ವಿತರಣೆ:**<br>• ಪರಿಶಿಷ್ಟ ಜಾತಿ & ಪಂಗಡದ ಫಲಾನುಭವಿಗಳಿಗೆ ಶೇಕಡ 90% ಸಹಾಯಧನದಲ್ಲಿ 10+1 ಕುರಿ/ಮೇಕೆ ಘಟಕ ವಿತರಣೆ |

| ಘಟಕದವಿವರಗಳು | ಘಟಕದ ವೆಚ್ಚ | ಸಹಾಯಧನ ಶೇಕಡ 90% | ಫಲಾನುಭವಿಯ ವಂತಿಕೆ 10% |
|---|---|---|---|
| 10+1 ಕುರಿ/ಮೇಕೆ ಘಟಕ ವಿತರಣೆ | ರೂ:66,000/- | ರೂ:59,400/- | ರೂ.6600/- |

5

➢ **ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ (ಆರ್.ಕೆ.ವಿ.ವೈ. ಅನುದಾನ):**

- ಕೃಷಿ ಕಾರ್ಮಿಕರು, ವಿಧವೆಯರು, ದೇವದಾಸಿಯರು, ನಿರ್ಗತಿಕ ಮಹಿಳೆಯರಿಗೆ ಸ್ವಾವಲಂಬಿ ಜೀವನವನ್ನು ನಡೆಸಲು ಹೈನು ಘಟಕ ವಿತರಣೆ

| **ಘಟಕದ ವಿವರಗಳು** | **ಘಟಕದ ವೆಚ್ಚ** | **ಸಾಮಾನ್ಯ ವರ್ಗ 25%** | | **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗಳು** | |
|---|---|---|---|---|---|
| | | **ಸಹಾಯಧನ 25%** | **ಫಲಾನುಭವಿ ವಂತಿಕೆ 75%** | **ಸಹಾಯಧನ 33.33%** | **ಫಲಾನುಭವಿ ವಂತಿಕೆ 66.67%** |
| ಒಂದು ಮಿಶ್ರ ತಳಿ ಹಾಲು ಕರೆಯುವ ಹಸು | ರೂ. 62,000/- | ರೂ. 15500/- | ರೂ. 46500/- | ರೂ. 20665/- | ರೂ. 41335/- |

6

➢ **ಕರ್ನಾಟಕ ಕುರಿ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ**

- **(6+1) ಕುರಿ /ಮೇಕೆ ಘಟಕ ವಿತರಣೆ:** ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ (6+1) ರ ಕುರಿ/ ಮೇಕೆ ಘಟಕಗಳನ್ನು ಪ್ರತಿ ಘಟಕಕ್ಕೆ ರೂ.45000/- ಗಳ ವೆಚ್ಚದಲ್ಲಿ ಪೂರೈಸಲಾಗುವುದು. ಈ ಘಟಕದ ವೆಚ್ಚದಲ್ಲಿ ಶೇಕಡ 90 ರಷ್ಟು ರೂ.40500.00 ಗಳನ್ನು ನಿಗಮದವತಿಯಿಂದ ಸಹಾಯಧನವಾಗಿ ನೀಡಲಾಗುವುದು. ಉಳಿಕೆ ಮೊತ್ತ ರೂ.4500.00 ಗಳನ್ನು ಫಲಾನುಭವಿ ವಂತಿಕೆ ಅಥವಾ ಸಾಲದ ರೂಪದಲ್ಲಿ ರಾಷ್ಟ್ರೀಕೃತ, ಗ್ರಾಮೀಣ, ಸ್ಥಳೀಯ ಸಹಕಾರಿ ಬ್ಯಾಂಕುಗಳ ವತಿಯಿಂದ ಒದಗಿಸಲಾಗಿದೆ.

- **ವಲಸೆ ಕುರಿಗಾರರಿಗೆ ಟೆಂಟ್ ವಿತರಣೆ:** ವಲಸೆ ಕುರಿಗಾಗರಿಗೆ ಸಂಚಾರಿ ಟೆಂಟ್, ಸೋಲಾರ್ ಟಾರ್ಚ್, ರಬ್ಬರ್ ಫ್ಲೋರ್ ಮ್ಯಾಟ್ ಮತ್ತು ರೇನ್ ಕೋಟ್ ಸೇರಿದಂತೆ ಪರಿಕರಗಳ ಕಿಟ್‌ಗಳ ವಿತರಣೆ

- **ವಲಸೆ ಕುರಿಗಾರರಿಗೆ ವಿಮಾ ಸೌಲಭ್ಯ:** ವಲಸೆ ಕುರಿಗಾರರು ಆಕಸ್ಮಿಕ ಮರಣ ಹೊಂದಿದಲ್ಲಿ ಅವಲಂಬಿತ ಕುಟುಂಬದವರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಕುರಿಗಾಹಿಗಳಿಗೆ ಐದು ಲಕ್ಷ ರೂ. ವಿಮಾ ಸೌಲಭ್ಯ ಒದಗಿಸಲಾಗಿದೆ.

- **ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ :**

ಪ್ರಕೃತಿ ವಿಕೋಪ ಪರಿಹಾರ ವ್ಯಾಪ್ತಿಯಲ್ಲಿ ಬರುವ ಹಾಗೂ ವಿಮೆ ಮಾಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಇನ್ನುಳಿದ ಸಂದರ್ಭಗಳಲ್ಲಿ 6 ತಿಂಗಳು ಮೇಲ್ಪಟ್ಟ ಕುರಿ ಮತ್ತು ಮೇಕೆ ಆಕಸ್ಮಿಕ ಅಥವಾ ದೃಢೀಕೃತ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ಕುರಿ /ಮೇಕೆ ಗೆ ರೂ. 5000/- ಪರಿಹಾರ ಧನ ಹಾಗೂ 3-6 ತಿಂಗಳ ವಯಸ್ಸಿನ ಕುರಿ/ ಮೇಕೆಗಳಿಗೆ 3500 ರೂ. ಪರಿಹಾರ ಧನವನ್ನು ನೀಡಲಾಗುವುದು.

7

➢ **ಲಸಿಕಾ ಕಾರ್ಯಕ್ರಮ:**

ಗುರುತಿಸಲ್ಪಟ್ಟ ಸಾಂಕ್ರಾಮಿಕ ರೋಗಗಲಾದ ಕಾಲುಬಾಯಿ ರೋಗ, ಕಂದುರೋಗ ಗಳಲೇರೋಗ, ಚಪ್ಪೆರೋಗ, ಕರುಳುಬೇನೆ, ನೆರಡಿರೋಗ, ಪಿ.ಪಿ.ಆರ್ ರೋಗದ ವಿರುದ್ಧ ಲಸಿಕೆ ಹಾಕುವುದು.

8

➢ **ಹಾಲು ಉತ್ಪಾದಕರಿಗೆ ಉತ್ತೇಜನ:**

- ಹಾಲು ಉತ್ಪಾದನೆಗೆ ಉತ್ತೇಜನ ನೀಡಲು ಕರ್ನಾಟಕ ಹಾಲು ಮಹಾ ಮಂಡಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಗೆ ರೂ. 5/- ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

9

➢ **ಜಾನುವಾರುಗಳ ಆರೋಗ್ಯ ಶಿಬಿರ**

- ಉಚಿತ ಜಾನುವಾರು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾನುವಾರುಗಳ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ.

10

➢ **ಕೋಳಿಮರಿ ವಿತರಣೆ:**

- ಕೋಳಿಮರಿಗಳನ್ನು ಉತ್ಪಾದಿಸಿ 5 ವಾರಗಳವರೆಗೆ ಸಾಕಣೆ ಮಾಡಿ ರೈತ ಮಹಿಳೆಯರಿಗೆ ತಲಾ 20 ಕೋಳಿಮರಿಗಳನ್ನು ವಿತರಿಸಲಾಗುತ್ತಿದೆ.

11

➢ **ಪ್ರಾಣಿ ಕಲ್ಯಾಣ ಸಹಾಯವಾಣಿ:**

- ಜಾನುವಾರುಗಳಿಗೆ 24/7 ನಿರಂತರ ಸೇವೆಯನ್ನು ಒದಗಿಸಲು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ರೈತರು ಸಹಾಯವಾಣಿಯನ್ನು ಪ್ರಾರಂಭಿಸಲಾಗಿದ್ದು, ಸಹಾಯವಾಣಿ ಸಂಖ್ಯೆ 8277100200 ಮೂಲಕ ಸಂಪರ್ಕಿಸಿ ಇಲಾಖೆಯ ತಾಂತ್ರಿಕ ಸೇವೆಯನ್ನು ಪಡೆಯಬಹುದಾಗಿದೆ.

12

➢ **ರಾಷ್ಟ್ರೀಯ ಜಾನುವಾರು ಮಿಷನ್**

- ವಿಪತ್ತು ನಿರ್ವಹಣೆ-ಜಾನುವಾರು ವಿಮಾ ಯೋಜನೆ,
- ಕಾರ್ಯಕ್ರಮದಡಿ ಜಾನುವಾರುಗಳಿಗೆ ವಿಮಾ ಸೌಲಭ್ಯ ಒದಗಿಸಲಾಗಿದೆ. ಫಲಾನುಭವಿಗಳ ಬೆಲೆಯುಳ್ಳ ಹೈನುಗಾರಿಕೆಗೆ ಯೋಗ್ಯವಾದ ಒಂದು ವರ್ಷ ಮೇಲ್ಪಟ್ಟ ಮತ್ತು ವಿಮೆಗೊಳಪಡಿಸುವ ಸಮಯದಲ್ಲಿ ಗರಿಷ್ಠ ವಯಸ್ಸು 8 ವರ್ಷಗಳಿಗೆ ಮೀರದಂತಹ ಮಣಕ /ಆಕಳು / ಎಮ್ಮೆಗಳನ್ನು ಒಂದು ವರ್ಷದ/ ಮೂರು ವರ್ಷದ ಅವಧಿಗೆ ಮಾರುಕಟ್ಟೆ ಮೌಲ್ಯದ ಶೇಕಡ 2%/6% ಪ್ರೀಮಿಯಂ ದರದಲ್ಲಿ ಗರಿಷ್ಠ ರೂ. 70 ಸಾವಿರ ಮೂಲ ಬೆಲೆಯವರೆಗೆ ಕೆಳಕಂಡ ಪ್ರೀಮಿಯಂ ಸಹಾಯಧನದ ದರದಂತೆ ವಿಮೆ ಸೌಲಭ್ಯ ಒದಗಿಸುವುದು.

| ಫಲಾನುಭವಿಯ ವರ್ಗ | ಸಹಾಯಧನ | ಫಲಾನುಭವಿಯ ವಂತಿಗೆ |
|---|---|---|
| ಬಿಪಿಎಲ್/ಎಸ್.ಸಿ.ಪಿ/ಟಿ.ಎಸ್.ಪಿ./ ಫಲಾನುಭವಿಗಳು | **70%** | **30%** |
| ಎಪಿಎಲ್ ಫಲಾನುಭವಿಗಳು | **50%** | **50%** |

13

➢ **ಕಿಸಾನ್ ಕ್ರೆಡಿಟ್ ಕಾರ್ಡ್:**

- ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಬಡ್ಡಿ ರಿಯಾಯಿತಿ ಸೌಲಭ್ಯವು ರೂ. 3 ಲಕ್ಷಗಳವರೆಗೆ ದೊರೆಯಬಹುದಾಗಿದ್ದು, ಪ್ರತಿ ರೈತರಿಗೆ ರೂ.1.60 ಲಕ್ಷ ಸಾಲ ಸೌಲಭ್ಯವನ್ನು ಯಾವುದೇ ಭದ್ರತೆಯಿಲ್ಲದೆ ಪಡೆಯುವ ಅವಕಾಶವಿರುತ್ತದೆ.

- ಕಿಸಾನ್ ಕ್ರೆಡಿಟ್ ಕಾರ್ಡ್‌ನಿಂದ ಪಡೆಯುವ ಸಾಲಕ್ಕೆ ಶೇ.2 ರಷ್ಟು ಬಡ್ಡಿ ಸಹಾಯಧನ ನೀಡುತ್ತಿದ್ದು, ಈ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿದಲ್ಲಿ ಹೆಚ್ಚುವರಿಯಾಗಿ ವಾರ್ಷಿಕ ಶೇ. 3 ರಷ್ಟು ಬಡ್ಡಿ ಸಹಾಯಧನದ ಸೌಲಭ್ಯವನ್ನು ಸಹಾ ಪಡೆಯಬಹುದಾಗಿದೆ.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 658 ಕ್ಕೆ ಅನುಬಂಧ-2**

ವಿಜಯಪುರ ಜಿಲ್ಲೆಯ ಒಟ್ಟು ಅಧಿಕಾರಿ/ಸಿಬ್ಬಂದಿ ವಿವರ

| ಕ್ರಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆ | ಭರ್ತಿಯಾದ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 01 | ಉಪನಿರ್ದೇಶಕರು | 02 | 0 | 0 |
| 02 | ಮುಖ್ಯ ಪಶುವೈದ್ಯಾಧಿಕಾರಿಗಳು | 13 | 10 | 03 |
| 03 | ಪಶುವೈದ್ಯಾಧಿಕಾರಿಗಳು | 86 | 63 | 23 |
| 04 | ಜಾನುವಾರು ಅಭಿವೃದ್ಧಿ ಅಧಿಕಾರಿಗಳು | 07 | 07 | 0 |
| 05 | ಸಹಾಯಕ ಆಡಳಿತ ಅಧಿಕಾರಿಗಳು | 01 | 01 | 0 |
| 06 | ಜಾನುವಾರು ಅಧಿಕಾರಿಗಳು | 10 | 10 | 0 |
| 07 | ಲ್ಯಾಬ್ ಟೆಕ್ನಿಶಿಯನ್ | 01 | 0 | 01 |
| 08 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 65 | 53 | 12 |
| 09 | ಪಶುವೈದ್ಯಕೀಯ ಪರೀಕ್ಷಕರು | 62 | 47 | 15 |
| 10 | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | 75 | 67 | 08 |
| 11 | ಅಧೀಕ್ಷಕರು | 02 | 02 | 0 |
| 12 | ಪ್ರಥಮ ದರ್ಜೆ ಸಹಾಯಕರು | 04 | 04 | 0 |
| 13 | ದ್ವಿತೀಯ ದರ್ಜೆ ಸಹಾಯಕರು | 07 | 07 | 0 |
| 14 | ಬೆರಳಚ್ಚುಗಾರರು | 03 | 02 | 01 |
| 15 | ವಾಹನ ಚಾಲಕರು | 07 | 02 | 05 |
| 16 | ಅನುಚರರು | 231 | 59 | 172 |
| | ಒಟ್ಟು | 576 | 336 | 240 |